VIJAYA KARNATAKA 30.10.11

# ಅಡಕೆ ಔಷಧೀಯ ಗುಣಗಳ ಸಂಶೋಧನೆ ಅಗತ್ಯ: ಕೊಂಕೋಡಿ

## ಅಡಕೆ ಉತ್ಪಾದಕತೆ ಮತ್ತು ಮೌಲ್ಯವರ್ಧನೆ: ಕೃಷಿಕರೊಂದಿಗೆ ಸಂವಾದ

**ವಿಕ ಸುದ್ದಿಲೋಕ** ವಿಟ್ಲ

ಧಾರ್ಮಿಕ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿರುವ ಅಡಕೆಯನ್ನು ಸರಕಾರ ಔಷಧೀಯ ವಸ್ತುವಾಗಿ ಶಿಫಾರಸು ಮಾಡಬೇಕಾಗಿದೆ. ಅಡಕೆಯಲ್ಲಿರುವ ಮಧುಮೇಹ ನಿರೋಧಕ, ಕ್ಯಾನ್ಸರ್ ನಿರೋಧಕ ಗುಣಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಸಬೇಕು ಎಂದು ಕ್ಯಾಂಪ್ಕೋ ಸಹಕಾರಿ ಸಂಸ್ಥೆ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಹೇಳಿದರು.

ಅವರು ವಿಟ್ಲ ಸಿಪಿಸಿಆರ್‌ಐ ಪ್ರಾಂತೀಯ ಕೇಂದ್ರದಲ್ಲಿ ಬುಧವಾರ ಅಡಕೆ ಕೃಷಿಯಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಬಗ್ಗೆ ರೈತರೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉತ್ತೇಜಕ ಶಕ್ತಿಯಿರುವ ಅಡಕೆಯನ್ನು ಇನ್ನೂ ಹಲವಾರು ರೀತಿಯಲ್ಲಿ ಬಳಸುವ ತಂತ್ರಜ್ಞಾನ ಅಭಿವೃದ್ಧಿಯಾಗಬೇಕು. ಯಾವುದೇ ಸಂಶೋಧನಾ ಸಂಸ್ಥೆಗಳು ರೈತರಿಗೆ ಪೂರಕವಾಗಿ ಕಾರ್ಯ ನಡೆಸಬೇಕು ಎಂದರು.

ಅಡಕೆ ಕೃಷಿಕರ ಎಲ್ಲ ಸಮಸ್ಯೆಗಳನ್ನು ಕ್ಯಾಂಪ್ಕೋ ಸಹಕಾರಿ ಸಂಸ್ಥೆ ಸರಕಾರಕ್ಕೆ ಸಮರ್ಪಕವಾಗಿ ವರದಿ ಸಲ್ಲಿಸಿದರೂ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಅವರು ಕಳವಳ ವ್ಯಕ್ತಪಡಿಸಿದರು.

**7 ಕೋಟಿ ಅನುದಾನ:** ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಸರಗೋಡು ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ(ಸಿಪಿಸಿಆರ್‌ಐ)ಯ ನಿರ್ದೇಶಕ ಡಾ. ಭಡಪ್ಪ ಮಾತನಾಡಿ, ಅಡಕೆಯುಕ್ತ ಹಲವಾರು ಉತ್ಪನ್ನಗಳಿಗೆ ನಿಷೇಧ, ಅಡಕೆ ಸೇವನೆಯಲ್ಲಿ ಯುವಜನರ ನಿರಾಸಕ್ತಿ, ವೈಎಲ್‌ಡಿ, ಕೊಳೆ ರೋಗದ ಪರಿಣಾಮ ಅಡಕೆ ಕೃಷಿಯ ಮೇಲೆ ಅನಿಶ್ಚಿತತೆಯ ವಾತಾವರಣ ಸೃಷ್ಟಿಸಿದೆ. ಈ ಸನ್ನಿವೇಶದಲ್ಲಿ ಐಸಿಎಆರ್ ನಿರ್ದೇಶಕರು ಸಂಕಷ್ಟದಲ್ಲಿರುವ ಅಡಕೆ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಸಾಲಿನಲ್ಲಿ 7 ಕೋ. ರೂ.ಗಳ ಅನುದಾನದ ವಿಶೇಷ ಪ್ಯಾಕೇಜ್‌ನ ಮೂಲಕ ಯೋಜನೆ ರೂಪಿಸಿದೆ. ಅಡಕೆಯ ಔಷಧೀಯ ಗುಣಗಳ ಬಗ್ಗೆ ಆಳವಾದ ಸಂಶೋಧನೆ, ಅಡಕೆ ಕೃಷಿಯಲ್ಲಿ ಯಂತ್ರಗಳ ಬಳಕೆಗೆ ಒತ್ತು ನೀಡಲಿದೆ ಎಂದು ತಿಳಿಸಿದರು.



ಅಡಕೆ ಭವಿಷ್ಯದ ಬೆಳೆ. ಸರಕಾರದಿಂದ ರೈತರ ಹೆಸರಲ್ಲಿ ಬರುವ ಅನುದಾನಗಳೆಲ್ಲವೂ ರೈತರಿಗೆ ಬಳಕೆಯಾಗಬೇಕು. ಕೃಷಿ ಸಂಸ್ಥೆಗಳಲ್ಲಿ ಫಾರ್ಮರ್ಸ್ ಡೇ ಆಚರಿಸಬೇಕು. ಮಾನಸಿಕ ಕಾಯಿಲೆಗೆ ಪರಿಣಾಮಕಾರಿ ಔಷಧಿಯಾಗಿರುವ ಅಡಕೆಯ ಬಗ್ಗೆ ಸಂಶೋಧನೆ ನಡೆಯಬೇಕು.

**- ಮಂಚಿ ಶ್ರೀನಿವಾಸ ಆಚಾರ್**, ಅ.ಭಾ. ಅಡಕೆ ಬೆಳೆಗಾರರ ಸಂಘದ ಅಧ್ಯಕ್ಷ

ಅಡಕೆಯಿಂದ ತಯಾರಿಸುವ ಔಷಧಿ, ಪಾನೀಯ, ಸಾಬೂನು ಇತ್ಯಾದಿಗಳ ಬಗ್ಗೆ ಕೃಷಿಕರಿಗೆ ಅಭಿಮಾನ, ಜಾಗೃತಿ ಮೂಡಬೇಕು. ರೈತ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಯೋಗಾಲಯ ಪರೀಕ್ಷೆಗೆ ಸುಲಭವಾಗುವಂತೆ ಪ್ರಯೋಗಾಲಯಗಳಲ್ಲಿ ರಿಯಾಯಿತಿ ತೋರಬೇಕು. **-ಬದನಾಜೆ ಮೂಗವಣ ಶಂಕರ ಭಟ್**, ಪ್ರಗತಿಪರ ರೈತ, ಕೃಷಿ ಸಂಶೋಧಕ

ಸಿಪಿಸಿಆರ್‌ಐ, ಕೃಷಿ ವಿಶ್ವವಿದ್ಯಾನಿಲಯ, ತೋಟಗಾರಿಕಾ ಇಲಾಖೆಗಳು ಒಟ್ಟು ಸೇರಿ ಅಡಕೆ ಕೃಷಿಯ ಬಗ್ಗೆ ಪರಿಣಾಮಕಾರಿಯಾದ ಯೋಜನೆ ಜಾರಿಗೆ ತರುತ್ತಿರುವುದರಿಂದ ರೈತರಿಗೆ ಅನುಕೂಲಕರವಾಗಲಿದೆ. ಅಡಕೆ ಬೆಳೆಯ ಬಗ್ಗೆ ಗಾಢ ಸಂಶೋಧನೆಗೂ ಸಹಕಾರಿಯಾಗಲಿದೆ ಎಂದು ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಾಸರಗೋಡು ಸಿಪಿಸಿಆರ್‌ಐ ಯೋಜನಾ ಸಂಯೋಜಕ (ಪಾಮ್ಸ್) ಡಾ. ಎಚ್.ಪಿ. ಮಹೇಶ್ವರಪ್ಪ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕಲ್ಲಿಕೋಟೆ ಅಡಕೆ ಮತ್ತು ಸಂಬಾರ ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ. ಹೋಮಿ ಚೆರಿಯನ್, ಶಿವಮೊಗ್ಗ ಮ್ಯಾಮ್ಕೋಸ್ ಸಹಕಾರಿ ಸಂಸ್ಥೆಯ ನಿರ್ದೇಶಕ ಪಿ.ಎನ್. ಶಶಿಧರ, ಅಖಿಲ ಭಾರತ ಅಡಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಂಚಿ ಶ್ರೀನಿವಾಸಾಚಾರ್, ಅಡಿಕೆ ಪತ್ರಿಕೆ ಸಂಪಾದಕ ಶ್ರೀಪಡ್ರೆ ಮತ್ತು ಪ್ರಗತಿಪರ ರೈತರಾದ ಬದನಾಜೆ ಮೂಗವನ ಶಂಕರ ಭಟ್ ಹಾಗೂ ಕಾಸರಗೋಡು ಮೀಯಪದವು ಪ್ರಗತಿಪರ ಕೃಷಿಕ ಡಾ.ಡಿ.ಸಿ. ಚೌಟ ಭಾಗವಹಿಸಿದ್ದರು.

ಅಡಿಕೆ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಗೊಳಿಸ ಲಾಯಿತು.

ಸಂವಾದದಲ್ಲಿ ಭಾಗವಹಿಸಿದ ದ.ಕ, ಕಾಸರಗೋಡು ಜಿಲ್ಲೆಯ ನೂರಾರು ಅಡಕೆ ಕೃಷಿಕರು ಅಡಕೆ ಕೃಷಿಯಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಬಗ್ಗೆ ಅಭಿಪ್ರಾಯ, ಸಲಹೆ ಹಂಚಿ ಕೊಂಡರು.

ಸಿಪಿಸಿಆರ್‌ನ ಮುಖ್ಯಸ್ಥ ಡಾ. ಕೆ.ಎಸ್. ಆನಂದ ಸ್ವಾಗತಿಸಿದರು. ವಿಜ್ಞಾನಿ ಡಾ. ಡಿ.ಜಗನ್ನಾಥನ್ ವಂದಿಸಿದರು. ಡಾ. ನಾಗರಾಜ್ ಎನ್.ಆರ್ ನಿರೂಪಿಸಿದರು.